**0601/1001/2075**

**VI Semester 3 Year LL.B./X Semester 5 Year B.A. LL.B. (Maj.-Min. System)/ X Semester 5 Year B.A. LL.B./B.B.A. LL.B. Examination, October/November 2021**

**LAW OF EVIDENCE**

Duration : 3 Hours

Max. Marks : 100

**Instructions :** 1. **Answer Q. No. 11 and any five of the remaining questions.**

2. **Q. No. 11 carries 20 marks and the remaining questions carry 16 marks each.**

3. **Answers should be written either in English or Kannada completely.**

Q. No. 1. Explain "May presume", "Shall presume" and "Conclusive proof". Marks : 16

''ಪೂರ್ವಭಾವನೆ ಮಾಡಬಹುದು'', ''ಪೂರ್ವಭಾವನೆ ಮಾಡತಕ್ಕದ್ದು'' ಮತ್ತು ''ನಿರ್ಣಾಯಕ ರುಜುವಾತು'' ಇವುಗಳನ್ನು ವಿವರಿಸಿರಿ.

Q. No. 2. Define admissions. State the persons whose admissions are relevant. Marks : 16

ಒಪ್ಪುವಿಕೆಗಳನ್ನು ವ್ಯಾಖ್ಯಾನಿಸಿರಿ. ಯಾವ ವ್ಯಕ್ತಿಗಳ ಒಪ್ಪುವಿಕೆಗಳು ಸುಸಂಬದ್ಧವಾಗಿರುವುದೆಂಬುದನ್ನು ಹೇಳಿರಿ.

Q. No. 3. What is primary evidence ? Discuss its scope and importance. Marks : 16

ಪ್ರಾಥಮಿಕ ಸಾಕ್ಷ್ಯ ಎಂದರೇನು ? ಅದರ ವ್ಯಾಪ್ತಿ ಮತ್ತು ಪ್ರಾಮುಖ್ಯತೆಯ ಬಗ್ಗೆ ಚರ್ಚಿಸಿ.

Q. No. 4. What is Estoppel ? Discuss the various kinds of Estoppel. Marks : 16

ವಿಬಂಧ (ಬಾಯಿ ಕಟ್ಟುವಿಕೆ) ಎಂದರೇನು ? ವಿಬಂಧದ ವಿವಿಧ ಪ್ರಕಾರಗಳನ್ನು ಚರ್ಚಿಸಿರಿ.

Q. No. 5. Who is expert ? Explain the matters in relations to which opinions of experts become relevant. Marks : 16

ಪರಿಣಿತ ಎಂದರೆ ಯಾರು ? ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಪರಿಣಿತರ ಅಭಿಪ್ರಾಯಗಳು ಸುಸಂಬದ್ಧವಾಗುವುದೆಂಬುದನ್ನು ವಿವರಿಸಿರಿ.

Q. No. 6. What are the privileged communications ? Discuss the law relating to professional communication. Marks : 16

ಉನ್ಮುಕ್ತ ಸಂವಹನಗಳು ಯಾವುವು ? ವೃತ್ತಿ ಸಂವಹನಕ್ಕೆ ಸಂಬಂಧಪಟ್ಟ ಕಾನೂನಿನ ಬಗ್ಗೆ ಚರ್ಚಿಸಿರಿ.

Q. No. 7. What are leading questions ? When can they be asked ? Marks : 16

ಉತ್ತರ ಸೂಚಕ ಪ್ರಶ್ನೆಗಳೆಂದರೇನು ? ಅವುಗಳನ್ನು ಯಾವಾಗ ಕೇಳಬಹುದು ?

Q. No. 8. Explain the relevances of facts forming part of same transaction. Marks : 16

ಒಂದೇ ವ್ಯವಹರಣೆಯ ಭಾಗವಾಗಿರುವ ಘಟನೆಗಳ ಸುಸಂಬದ್ಧತೆಯನ್ನು ವಿವರಿಸಿರಿ.

Q. No. 9. Explain the rule that oral evidence must always be direct. State exceptions. Marks : 16

ಮೌಖಿಕ ಸಾಕ್ಷ್ಯವು ಸದಾ ನೇರವಾಗಿರತಕ್ಕದ್ದೆಂಬ ನಿಯಮವನ್ನು ವಿವರಿಸಿರಿ. ಇದಕ್ಕೆ ಅಪವಾದಗಳನ್ನು ಹೇಳಿರಿ.

Q. No. 10. Write short note on **any two** of the following : Marks : 2x8=16

ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Res gestae

ರೆಸ್ ಗೆಸ್ಟೆ

(b) Public document

ಸಾರ್ವಜನಿಕ ದಸ್ತಾವೇಜು

(c) Secondary evidence.

ದ್ವಿತೀಯಕ ಸಾಕ್ಷ್ಯ.

Q. No. 11. Solve **any two** of the following problems : Marks : 2x10=20

ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿ :

(a) A person is charged with ticketless travelling in a train. In this case on whom does the burden of proof lie ?

ಒಬ್ಬ ವ್ಯಕ್ತಿಯ ಮೇಲೆ ಟಿಕೆಟ್ ಇಲ್ಲದೆ ರೈಲಿನಲ್ಲಿ ಪ್ರಯಾಣಿಸಿರುವ ಆರೋಪ ಮಾಡಲಾಗಿದೆ. ಈ ಪ್ರಕರಣದಲ್ಲಿ ರುಜುವಾತಿನ ಹೊಣೆ ಯಾರ ಮೇಲೆ ಇರುತ್ತದೆ ?



(b) 'A' is accused murder of 'C'. During trial 'A' confesses I and 'B' murdered 'C'. Can this confession be considered against 'B' ?

'ಅ' ನು 'ಕ' ಎಂಬುವವನನ್ನು ಕೊಲೆ ಮಾಡಿದ ಆಪಾದನೆಗೊಳಗಾಗಿದ್ದಾನೆ. ವಿಚಾರಣೆ ಕಾಲಕ್ಕೆ ಅವನು ನಾನು ಮತ್ತು 'ಬ' ನು ಸೇರಿ 'ಕ' ನನ್ನು ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಗೆಯನ್ನು ಮಾಡಿರುತ್ತಾನೆ. ಈ ತಪ್ಪೊಪ್ಪಿಗೆಯನ್ನು 'ಬ' ನ ವಿರುದ್ಧ ಪರಿಗಣಿಸಬಹುದೇ ?

(c) The question is whether 'A' was a legitimate son of 'B'. Does the fact that, 'A' was always treated as such by the members of the family relevant ?

'ಅ' ನು 'ಬ' ನ ಧರ್ಮಜ ಮಗನೇ ಎಂಬ ಪ್ರಶ್ನೆ ಇದೆ. ಕುಟುಂಬದ ಸದಸ್ಯರೆಲ್ಲರೂ 'ಅ' ನನ್ನು ಧರ್ಮಜ ಮಗನೆಂದೇ ನಡೆಸಿಕೊಳ್ಳುತ್ತಿರುವ ವಾಸ್ತವಿಕತೆಯು ಸುಸಂಬದ್ಧವೇ ?

0601/1001/2075

**VI Semester 3 Year LL.B./X Semester 5 Year B.A. LL.B./B.B.A.LL.B./ B.Com. LL.B./B.A. LL.B. (Maj-Min. System) Examination, October/November 2022 (June 2022)**

# LAW OF EVIDENCE

Duration : 3 Hours

Max. Marks : 100

**Instructions : 1. Answer Q. No. 9 and any five of the remaining.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or in Kannada completely.**

Q. No. 1. What is evidence ? Explain in detail the different kinds of evidence. In which cases evidence need not be proved ?

ಸಾಕ್ಷ್ಯ/ಪುರಾವೆ ಎಂದರೇನು ? ವಿವಿಧ ರೀತಿಯ ಪುರಾವೆ/ಸಾಕ್ಷ್ಯಗಳನ್ನು ವಿವರವಾಗಿ ವಿವರಿಸಿ. ಯಾವ ಸಂದರ್ಭಗಳಲ್ಲಿ ಸಾಕ್ಷ್ಯ/ಪುರಾವೆಗಳನ್ನು ಸಾಬೀತುಪಡಿಸಬೇಕಾಗಿಲ್ಲ ?

Marks : 16

Q. No. 2. Explain the doctrine of 'Res Gestae' with the help of decided cases.

'ರೆಸ್ ಗೆಸ್ಟೇ' ಸಿದ್ಧಾಂತವನ್ನು ನಿರ್ಧರಿತ ಪ್ರಕರಣಗಳ ಸಹಾಯದಿಂದ ವಿವರಿಸಿ.

Marks : 16

Q. No. 3. What do you mean by 'primary evidence' and 'secondary evidence' ? Enumerate the laws in which secondary evidence relating to documents may be given.

'ಪ್ರಾಥಮಿಕ ಸಾಕ್ಷ್ಯ' ಮತ್ತು 'ದ್ವಿತೀಯಕ ಸಾಕ್ಷ್ಯ'ಗಳೆಂದರೇನು ? ದಸ್ತಾವೇಜುಗಳಿಗೆ ಸಂಬಂಧಿಸಿದ ದ್ವಿತೀಯಕ ಸಾಕ್ಷ್ಯವನ್ನು ನೀಡಬಹುದಾದ ಸಂದರ್ಭಗಳನ್ನು ವ್ಯಾಖ್ಯಾನಿಸಿ.

Marks : 16

Q. No. 4. What do you mean by 'extra-judicial confession' ? What are the grounds for acceptance and rejection of extra-judicial confession ?

'ನ್ಯಾಯಾಂಗೇತರ ತಪ್ಪೊಪ್ಪಿಗೆ' ಎಂದರೇನು ? ಯಾವ ಆಧಾರಗಳ ಮೇಲೆ ಈ ನ್ಯಾಯಾಂಗೇತರ ತಪ್ಪೊಪ್ಪಿಗೆಯನ್ನು ಸ್ವೀಕಾರ ಹಾಗೂ ನಿರಾಕರಣೆ ಮಾಡಬಹುದು ?

Marks : 16

Q. No. 5. Who are called experts ? What is the evidentiary value of opinions of experts ?

ಯಾರನ್ನು ಪರಿಣಿತರು ಎಂದು ಕರೆಯುತ್ತಾರೆ ? ತಜ್ಞರ ಅಭಿಪ್ರಾಯದ ಸಾಕ್ಷ್ಯದ ಮೌಲ್ಯವನ್ನು ವಿವರಿಸಿರಿ.

Marks : 16

P.T.O.

Q. No. 6. What is the importance of 'cross-examination' ? Distinguish between 'examination in chief', 'cross-examination' and 're-examination' ? Marks : 16

'ಪಾಟೀ ಸವಾಲಿ'ನ ಪ್ರಾಮುಖ್ಯತೆ ಏನು ? 'ಮುಖ್ಯ ವಿಚಾರಣೆ', 'ಪಾಟೀ ಸವಾಲು' ಮತ್ತು 'ಪುನರ್ ವಿಚಾರಣೆ' ನಡುವಿನ ವ್ಯತ್ಯಾಸವನ್ನು ವಿವರಿಸಿರಿ.

Q. No. 7. What is estoppel ? Explain the different kinds of estoppel. Marks : 16

ವಿಬಂಧ ತತ್ವ ಎಂದರೇನು ? ವಿವಿಧ ರೀತಿಯ ವಿಬಂಧ ತತ್ವಗಳ ಬಗ್ಗೆ ವಿವರಿಸಿರಿ.

Q. No. 8. Write short notes on **any two** of the following : Marks : 2x8=16

ಬೇಕಾದ ಎರಡಕ್ಕೆ ಟಿಪ್ಪಣಿ ಬರೆಯಿರಿ :

(a) Dying declaration.
ಮರಣಕಾಲೀನ ಘೋಷಣೆ.

(b) Character evidence.
ಚಾರಿತ್ರ್ಯಕ್ಕೆ ಸಂಬಂಧಿಸಿದ ಸಾಕ್ಷ್ಯ.

(c) Burden of proof.
ರುಜುವಾತಿನ ಭಾರ/ಋಜುವಾತಿನ ಋಣಭಾರ.

Q. No. 9. Answer **any two** with reasons : Marks : 2x10=20

ಯಾವುದೇ ಎರಡಕ್ಕೆ ಕಾರಣಗಳೊಂದಿಗೆ ಉತ್ತರಿಸಿ :

(a) 'A', a client says to 'B', an advocate "I had a physical relationship with 'X', wife of 'P' with her consent and I request you to defend my case." Is this communication protected under the Indian Evidence Act ? Decide.

'A' ಎಂಬ ಕಕ್ಷಿಗಾರನು ತನ್ನ ವಕೀಲ 'B' ಗೆ ಈ ರೀತಿ ಹೇಳುತ್ತಾನೆ, ''ನಾನು 'X', 'P' ಯ ಪತ್ನಿಯೊಂದಿಗೆ, ಅವಳ ಒಪ್ಪಿಗೆಯೊಂದಿಗೆ ದೈಹಿಕ ಸಂಬಂಧವನ್ನು ಹೊಂದಿದ್ದೇನೆ ಮತ್ತು ನನ್ನ ಪ್ರಕರಣವನ್ನು ಸಮರ್ಥಿಸಲು ನಾನು ನಿಮ್ಮನ್ನು ವಿನಂತಿಸುತ್ತೇನೆ.'' ಈ ಸಂವಹನವು ಭಾರತೀಯ ಸಾಕ್ಷ್ಯ ಕಾಯ್ದೆಯ ಅಡಿಯಲ್ಲಿ ರಕ್ಷಿಸಲ್ಪಟ್ಟಿದೆಯೇ ? ನಿರ್ಧರಿಸಿ.



(b) 'A' prosecutes 'B' for stealing his cow and 'B' is convicted. 'A' afterwards sues 'C' for the cow which 'B' had sold to 'C', before 'B' was convicted. Will 'A' succeed ?

'A' ಎಂಬಾತನು ತನ್ನ ಹಸುವನ್ನು ಕದ್ದಿದ್ದಕ್ಕಾಗಿ 'B' ಯನ್ನು ವಿಚಾರಣೆಗೆ ಒಳಪಡಿಸುತ್ತಾನೆ ಮತ್ತು 'B' ಗೆ ಶಿಕ್ಷೆಯಾಗುತ್ತದೆ. 'B' ಯು ತನಗೆ ಶಿಕ್ಷೆಯಾಗುವ ಮುನ್ನ 'C'ಗೆ ಮಾರಿದ ಹಸುವಿಗಾಗಿ 'A' ಎಂಬಾತನು 'C' ವಿರುದ್ಧ ಮೊಕದ್ದಮೆ ಹೂಡುತ್ತಾನೆ. ಈ ಪ್ರಕರಣದಲ್ಲಿ 'A' ಗೆ ಜಯವಾಗುತ್ತದೆಯೇ ?

(c) 'A' and 'B', his wife are charged with the murder of a baby entrusted to them for nursing. The prosecution adduces evidence that several babies entrusted to the two accused were never heard of thereafter and dead bodies of several infants entrusted to them for nursing were found near their residence buried in the yard of house occupied by them. Is the evidence relevant and admissible ?

'A' ಮತ್ತು 'B' ದಂಪತಿಗಳು ಶುಶ್ರೂಷೆಗಾಗಿ ತಮಗೆ ಒಪ್ಪಿಸಲಾದ ಮಗುವನ್ನು ಕೊಂದಿರುವ ಆರೋಪವನ್ನು ಎದುರಿಸುತ್ತಿದ್ದಾರೆ. ಪ್ರಾಸಿಕ್ಯೂಷನ್ ಅವರ ಪುರಾವೆಗಳ ಪ್ರಕಾರ ಇಬ್ಬರು ಆರೋಪಿಗಳಿಗೆ ಒಪ್ಪಿಸಲಾದ ಹಲವಾರು ಶಿಶುಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಶುಶ್ರೂಷೆಗಾಗಿ ಒಪ್ಪಿಸಲಾದ ಶಿಶುಗಳ ಮೃತದೇಹಗಳು ಅವರು ವಾಸಿಸುತ್ತಿದ್ದ ಮನೆಯ ಅಂಗಳದಲ್ಲಿ ಹೂಳಲ್ಪಟ್ಟಿರುವುದು ಕಂಡುಬಂದಿದೆ. ಈ ಸಾಕ್ಷ್ಯವು ಸುಸಂಬದ್ಧ ಮತ್ತು ಸ್ವೀಕಾರಾರ್ಹವೇ ?

---

Q. No. 4. b) A son who has just reached majority sold property to his father. Subsequently the son has filed a suit for rescinding this sale. Father contends that transaction was made in good faith. On whom the burden of proof lies ? Marks : 6

ಈಗ ತಾನೆ ಪ್ರಾಪ್ತವಯಸ್ಸಿಗೆ ಬಂದಿರುವ ಮಗನು ತನ್ನ ಸ್ವತ್ತನ್ನು ತಂದೆಗೆ ಮಾರಿದ್ದಾನೆ. ತದನಂತರ ಈ ಮಾರಾಟ ರದ್ದತಿಗಾಗಿ ದಾವೆ ಹೂಡಿದ್ದಾನೆ. ತಂದೆಯು ಈ ವ್ಯವಹಾರವು ಸದುದ್ದೇಶದ್ದು ಎಂದು ಹೇಳಿದ್ದಾನೆ. ರುಜುವಾತಿನ ಭಾರ ಯಾರ ಮೇಲಿದೆ ?

UNIT – V

Q. No. 5. a) What are leading questions ? When can they be asked ? Marks : 10

ಉತ್ತರ ಸೂಚಕ ಪ್ರಶ್ನೆಗಳೆಂದರೇನು ? ಅವುಗಳನ್ನು ಯಾವಾಗ ಕೇಳಬಹುದು ?

OR/ಅಥವಾ

Q. No. 5. a) Explain the protection given to communications between husband and wife Marks : 10

ಗಂಡ ಮತ್ತು ಹೆಂಡತಿಯ ನಡುವಿನ ಸಂವಾದಗಳಿಗಿರುವ ರಕ್ಷಣೆಗಳನ್ನು ವಿವರಿಸಿರಿ.

Q. No. 5. b) 'A' is charged with the offence of rape. His advocate intends to ask about the previous sexual experience of victim during her cross examination. Can he do so ? Marks : 6

'ಅ'ನು ಅತ್ಯಾಚಾರ ಅಪರಾಧದ ಆರೋಪಿಯಾಗಿದ್ದಾನೆ. ಆತನ ವಕೀಲನು ಸಂತ್ರಸ್ತ ಮಹಿಳೆಗೆ ಅವಳ ಪೂರ್ವ ಲೈಂಗಿಕ ಅನುಭವದ ಕುರಿತು ಪ್ರಶ್ನೆ ಕೇಳಲು ಬಯಸಿದ್ದಾನೆ. ಅವನು ಹಾಗೆ ಮಾಡಬಹುದೇ ?

OR/ಅಥವಾ

Q. No. 5. b) In a criminal case, one of the prosecution witnesses has turned hostile. Can he be cross-examined by the prosecution ? Marks : 6

ಅಪರಾಧ ಪ್ರಕರಣವೊಂದರಲ್ಲಿ ಅಭಿಯೋಜನೆ ಸಾಕ್ಷಿಯೊಬ್ಬನು ಪ್ರತಿಕೂಲ ಸಾಕ್ಷಿಯಾಗಿದ್ದಾನೆ. ಅಭಿಯೋಜನೆಯು ಅವನನ್ನು ಪಾಟೀ ಸವಾಲು ಮಾಡಬಹುದೇ ?

---

# 4033/5075/6035/7035

**VI Semester 3 Year LL.B./VIII Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, October/November 2022 (June 2022)**

**LAW OF EVIDENCE**

Duration : 3 Hours

Max. Marks : 80

**Instructions :** 1. **Answer all questions.**

2. **One essay type question and one short note/ problem each compulsory from each Unit.**

3. **In each question Part (a) carries 10 marks and Part (b) carries 6 marks.**

UNIT – I

Q. No. 1. a) Explain the relevancy of facts forming part of same transaction. Marks : 10

ಒಂದು ವ್ಯವಹರಣೆಯ ಭಾಗವಾಗಿರುವ ಘಟನೆಗಳ ಸುಸಂಬದ್ಧತೆಯನ್ನು ವಿವರಿಸಿರಿ.

OR/ಅಥವಾ

Q. No. 1. a) Explain the meaning of evidence and state the principles regarding reception of circumstantial evidence. Marks : 10

ಸಾಕ್ಷ್ಯದ ಅರ್ಥವನ್ನು ವಿವರಿಸಿರಿ ಮತ್ತು ಸಾಂದರ್ಭಿಕ ಸಾಕ್ಷ್ಯ ಸ್ವೀಕೃತಿಯ ತತ್ವಗಳನ್ನು ಹೇಳಿರಿ.

Q. No. 1. b) 'A' is tried for the murder of 'B' by poison. Before the death of B, A procured poison similar to that which was administered to B. Explain the relevancy of this fact. Marks : 6

'ಅ'ನು 'ಬ'ನಿಗೆ ವಿಷಹಾಕಿ ಸಾಯಿಸಿದ್ದಕ್ಕೆ ವಿಚಾರಣೆಗೊಳಪಟ್ಟಿದ್ದಾನೆ. 'ಬ'ನ ಸಾವಿಗಿಂತ ಮುಂಚೆ ಅವನಿಗೆ ಹಾಕಲಾಗಿದ್ದ ವಿಷಕ್ಕೆ ಹೋಲುವ ವಿಷವನ್ನು 'ಅ'ನು ಕೊಂಡುಕೊಂಡಿದ್ದನು. ಈ ಘಟನೆಯ ಸುಸಂಬದ್ಧತೆಯನ್ನು ವಿವರಿಸಿರಿ.

OR/ಅಥವಾ

Q. No. 1. b) 'A' has filed suit against 'B' for the recovery of loan. 'B' denies the loan. 'A' wants to prove his statement made to 'C' wherein he stated that he lent loan to 'B'. Can he do so ? Marks : 6

'ಅ'ನು 'ಬ'ನ ವಿರುದ್ಧ ಸಾಲ ವಸೂಲಾತಿ ದಾವೆ ಹೂಡಿದ್ದಾನೆ. 'ಬ'ನು ಸಾಲವನ್ನು ನಿರಾಕರಿಸಿದ್ದಾನೆ. 'ಅ'ನು 'ಕ'ನ ಮುಂದೆ ತಾನು 'ಬ'ನಿಗೆ ಸಾಲ ಕೊಟ್ಟಿರುವುದಾಗಿ ಹೇಳಿರುವ ಹೇಳಿಕೆಯನ್ನು ರುಜುವಾತುಪಡಿಸಲು ಬಯಸಿದ್ದಾನೆ. ಆತನು ಹಾಗೆ ಮಾಡಬಹುದೇ ?

UNIT – II

Q. No. 2. a) Explain the evidentiary value of confession of co-accused. Marks : 10

ಸಹ ಆಪಾದಿತನ ತಪ್ಪೊಪ್ಪಿಗೆಯ ಸಾಕ್ಷ್ಯಮೌಲ್ಯವನ್ನು ವಿವರಿಸಿರಿ.

OR/ಅಥವಾ

Q. No. 2. a) Explain the matters upon which expert opinion may become relevant. Marks : 10

ಪರಿಣತರ ಅಭಿಪ್ರಾಯವು ಸುಸಂಬದ್ಧವಾಗಬಹುದಾದ ವಿಷಯಗಳನ್ನು ವಿವರಿಸಿರಿ.

Q. No. 2. b) 'A' married woman has committed suicide, after sending an e-mail to her father. The said e-mail revealed that she was subjected cruelty by her husband. Examine the relevancy of e-mail. Marks : 6

'ಅ' ಎಂಬ ವಿವಾಹಿತ ಮಹಿಳೆ ತನ್ನ ತಂದೆಗೆ ಮಿಂಚಂಚೆಯೊಂದನ್ನು ಕಳಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆ ಮಿಂಚಂಚೆಯಲ್ಲಿ ಅವಳಿಗೆ ಗಂಡನಿಂದ ಆದ ಕ್ರೌರ್ಯದ ಬಗ್ಗೆ ತಿಳಿಸಿರುವುದು ಬೆಳಕಿಗೆ ಬಂದಿದೆ. ಈ ಮಿಂಚಂಚೆಯ ಸುಸಂಬದ್ಧತೆ ಪರೀಕ್ಷಿಸಿರಿ.

OR/ಅಥವಾ

Q. No. 2. b) 'A' is accused of theft. 'A' has confessed before that police and has shown the place where stolen goods were kept. Police have recovered the goods. Examine the evidentiary value of his statement to Police. Marks : 6

'ಅ'ನು ಕಳ್ಳತನದ ಆರೋಪಿಯಾಗಿದ್ದಾನೆ. ಆತನು ಪೋಲೀಸರಿಗೆ ತಪ್ಪೊಪ್ಪಿಕೊಂಡಿದ್ದು ಕದ್ದ ವಸ್ತುಗಳನ್ನಿಟ್ಟ ಸ್ಥಳ ತೋರಿಸಿದ್ದಾನೆ. ಪೋಲೀಸರು ಆ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಪೋಲೀಸರಿಗೆ ಆತನು ಮಾಡಿರುವ ಹೇಳಿಕೆಯ ಸಾಕ್ಷ್ಯಮೌಲ್ಯ ಪರೀಕ್ಷಿಸಿರಿ.

UNIT – III

Q. No. 3. a) Explain the relevancy of character evidence in civil and criminal cases. Marks : 10

ಅಪರಾಧಿಕ ಮತ್ತು ದಿವಾನಿ ಪ್ರಕರಣಗಳಲ್ಲಿ ನಡತೆಯ ಸಾಕ್ಷ್ಯದ ಸುಸಂಬದ್ಧತೆಯನ್ನು ವಿವರಿಸಿರಿ.

OR/ಅಥವಾ



Q. No. 3. a) Explain the provisions relating to proof of handwriting and signatures. Marks : 10

ಕೈಬರಹ ಮತ್ತು ಸಹಿಗಳ ರುಜುವಾತಿಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

Q. No. 3. b) 'A' agrees to sell his horse to 'B' for Rs. 1,000 or Rs. 1,500. Can evidence be given to show the exact price that should be paid ? Marks : 6

'ಅ'ನು 'ಬ'ನಿಗೆ ತನ್ನ ಕುದುರೆಯನ್ನು 1,000 ಅಥವಾ 1,500 ರೂಪಾಯಿಗಳಿಗೆ ಮಾರಲು ಒಪ್ಪಿಕೊಂಡಿದ್ದಾನೆ. ಯಾವ ನಿರ್ದಿಷ್ಟ ಬೆಲೆ ಸಂದಾಯ ಮಾಡಬೇಕೆಂಬುದರ ಕುರಿತು ಸಾಕ್ಷ್ಯ ಸಲ್ಲಿಸಬಹುದೇ ?

OR/ಅಥವಾ

Q. No. 3. b) Write a note on proof of electronic records. Marks : 6

ವಿದ್ಯುನ್ಮಾನ ದಾಖಲಾತಿಗಳ ರುಜುವಾತಿನ ಕುರಿತು ಟಿಪ್ಪಣಿ ಬರೆಯಿರಿ.

UNIT – IV

Q. No. 4. a) Explain the meaning of burden of proof and state on whom the burden of proof as to particular fact lies. Marks : 10

ರುಜುವಾತಿನ ಭಾರದ ಅರ್ಥವನ್ನು ವಿವರಿಸಿರಿ ಮತ್ತು ನಿರ್ದಿಷ್ಟ ಘಟನೆಯ ರುಜುವಾತಿನ ಭಾರ ಯಾರ ಮೇಲಿದೆ ಎಂಬುದನ್ನು ಹೇಳಿರಿ.

OR/ಅಥವಾ

Q. No. 4. a) Explain estoppel and state its kinds. Marks : 10

ವಿಬಂಧ ತತ್ವವನ್ನು ವಿವರಿಸಿರಿ ಮತ್ತು ಇದರ ಪ್ರಕಾರಗಳನ್ನು ಹೇಳಿರಿ.

Q. No. 4. b) 'A' has drawn a bill on 'B' for Rs. 5,000 payable to 'C'. When 'C' has approached 'B', for money 'B 'is denying the authority of 'A' to draw bill on him. Decide. Marks : 6

'ಅ'ನು 'ಕ'ನಿಗೆ ಸಂದಾಯವಾಗುವಂತೆ 'ಬ'ನ ಮೇಲೆ ರೂಪಾಯಿ 5,000 ಗಳ ಬಿಲ್ಲನ್ನು ಬರೆದಿದ್ದಾನೆ. 'ಕ'ನು 'ಬ'ನನ್ನು ಹಣಕ್ಕಾಗಿ ಸಂಪರ್ಕಿಸಿದಾಗ ಅವನು ತನ್ನ ಮೇಲೆ ಬಿಲ್ಲು ಬರೆಯುವ 'ಅ' ನ ಅಧಿಕಾರವನ್ನು ಅಲ್ಲಗಳೆದಿದ್ದಾನೆ. ನಿರ್ಧರಿಸಿರಿ.

OR/ಅಥವಾ

**VI Semester 3 Year LL.B./X Semester 5 Year B.A. LL.B./ B.B.A. LL.B./B.Com. LL.B./B.A. LL.B. (Maj.-Min. System) Examination, March/April 2023 (Dec. 2022)**

# LAW OF EVIDENCE

Duration : 3 Hours

Max. Marks : 100

**Instructions :** 1. **Answer Q. No. 9 and any five of the remaining.**

2. **Q. No. 9 carries 20 marks and rest carry 16 marks each.**

3. **Answers should be written either in English or Kannada completely.**

Q. No. 1. Explain "May Presume", "Shall Presume" and "Conclusive Proof" with the help of illustrations.

Marks : 16

ದೃಷ್ಟಾಂತಗಳ ಸಹಾಯದೊಂದಿಗೆ ''ಪೂರ್ವಭಾವನೆ ಮಾಡಬಹುದು'', ''ಪೂರ್ವಭಾವನೆ ಮಾಡತಕ್ಕದ್ದು'' ಮತ್ತು ''ನಿರ್ಣಯಾತ್ಮಕ ರುಜುವಾತು'' ಗಳನ್ನು ವಿವರಿಸಿರಿ.

Q. No. 2. Discuss the relevancy of facts relating to motive, preparation and conduct.

Marks : 16

ಧ್ಯೇಯ, ಸಿದ್ಧತೆ ಮತ್ತು ನಡತೆಗೆ ಸಂಬಂಧಿಸಿದ ಸಂಗತಿಗಳ ಸುಸಂಬದ್ಧತೆಯನ್ನು ಚರ್ಚಿಸಿರಿ.

Q. No. 3. Define 'confession'. Explain the provisions relating to relevancy and admissibility of confessions.

Marks : 16

'ತಪ್ಪೊಪ್ಪಿಗೆ'ಯನ್ನು ವ್ಯಾಖ್ಯಾನಿಸಿ. ತಪ್ಪೊಪ್ಪಿಗೆಗಳ ಸುಸಂಬದ್ಧತೆ ಮತ್ತು ಅಂಗೀಕಾರಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿ.

Q. No. 4. Explain the relevance of character evidence in civil and criminal cases.

Marks : 16

ದಿವಾನಿ ಮತ್ತು ಅಪರಾಧಿಕ ಪ್ರಕರಣಗಳಲ್ಲಿ ನಡತೆಯ ಸಾಕ್ಷ್ಯದ ಸುಸಂಬದ್ಧತೆಯನ್ನು ವಿವರಿಸಿ.

Q. No. 5. Discuss the provisions relating to proof of public documents. Marks : 16

ಸಾರ್ವಜನಿಕ ದಸ್ತಾವೇಜುಗಳ ರುಜುವಾತಿನ ಕುರಿತಾದ ಉಪಬಂಧಗಳನ್ನು ಚರ್ಚಿಸಿರಿ.

Q. No. 6. Define burden of proof. On whom does it lie ? Explain. Marks : 16

ರುಜುವಾತಿನ ಹೊಣೆಯನ್ನು ವ್ಯಾಖ್ಯಾನಿಸಿ. ಅದು ಯಾರ ಮೇಲೆ ಇರುತ್ತದೆ ? ವಿವರಿಸಿ.

Q. No. 7. Explain the provisions of Indian Evidence Act relating to privileged communications. Marks : 16

ವಿಶೇಷಾಧಿಕಾರದ ಸಂವಹನಗಳ ಕುರಿತು ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಇರುವ ಉಪಬಂಧಗಳನ್ನು ವಿವರಿಸಿ.

Q. No. 8. Write short notes on **any two** : Marks : 8x2=16

ಯಾವುದೇ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Doctrine of Res Gestae.

ರೆಸ್ ಗೆಸ್ಟೆ ಸಿದ್ಧಾಂತ.

(b) Hearsay Evidence.

ಕೇಳಿಕೆಯ ಸಾಕ್ಷ್ಯ.

(c) Presumption in dowry death cases.

ವರದಕ್ಷಿಣೆ ಸಾವು ಪ್ರಕರಣಗಳಲ್ಲಿನ ಪೂರ್ವಭಾವನೆ.

Q. No. 9. Solve **any two** of the following problems : Marks : 10x2=20

ಕೆಳಗಿನವುಗಳ ಸಮಸ್ಯೆಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿರಿ :

(a) 'A' is accused of murder of 'C'. During trial 'A' confesses, "I and 'B' murdered 'C' ". Can this confession be considered against 'B' ?

'A'ಯು 'C'ಯನ್ನು ಕೊಲೆ ಮಾಡಿದ ಆಪಾದನೆಗೊಳಗಾಗಿದ್ದಾನೆ. ವಿಚಾರಣೆ ಕಾಲದಲ್ಲಿ 'A' ನು "ನಾನು ಮತ್ತು 'B' ಸೇರಿ 'C'ಯನ್ನು ಕೊಲೆ ಮಾಡಿರುವುದಾಗಿ" ತಪ್ಪೊಪ್ಪಿಗೆಯನ್ನು ಮಾಡಿರುತ್ತಾನೆ. ಈ ತಪ್ಪೊಪ್ಪಿಗೆಯನ್ನು 'B' ನ ವಿರುದ್ಧ ಪರಿಗಣಿಸಬಹುದೇ ?



(b) The question is whether a given road is a public road or not. Does the statement made by a deceased headman of the village that "The road was public" relevant ?

ಒಂದು ರಸ್ತೆಯು ಸಾರ್ವಜನಿಕ ರಸ್ತೆಯೋ ಅಥವಾ ಅಲ್ಲವೋ ಎನ್ನುವುದು ಪ್ರಶ್ನೆ "ರಸ್ತೆಯು ಸಾರ್ವಜನಿಕವಾದದ್ದು" ಎನ್ನುವ ಗ್ರಾಮದ ಒಬ್ಬ ಮೃತನಾದ ಮುಖಂಡನ ಹೇಳಿಕೆಯು ಸುಸಂಬದ್ಧವೇ ?

(c) 'X' wants to prove a registered will. He contends that he need not call any attesting witness for the purpose of proving will as the will is registered. Decide.

'X' ನು ಒಂದು ನೋಂದಾಯಿತ ಮರಣಶಾಸನ ರುಜುವಾತು ಪಡಿಸಲು ಬಯಸಿದ್ದಾನೆ. ಮರಣಶಾಸನ ನೋಂದಣಿಯಾಗಿರುವುದರಿಂದ ಅದನ್ನು ರುಜುವಾತು ಪಡಿಸಲು ಯಾವುದೇ ದೃಢೀಕರಿಸಿದ ಸಾಕ್ಷಿದಾರನನ್ನು ಕರೆಯುವ ಅವಶ್ಯಕತೆಯಿಲ್ಲವೆಂದು ವಾದಿಸುತ್ತಾನೆ. ತೀರ್ಮಾನಿಸಿ.

---

UNIT – V

Q. No. 5. (a) Explain the provisions relating to protection of professional communications. Marks : 10

ವೃತ್ತಿಪರ ಸಂವಾದಗಳ ರಕ್ಷಣೆಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

(a) Explain the order of examination of witnesses. Marks : 10

ಸಾಕ್ಷಿದಾರರ ವಿಚಾರಣೆ ಕ್ರಮಾಂಕವನ್ನು ವಿವರಿಸಿರಿ.

Q. No. 5. (b) A client says to his advocate that he wish to obtain a property by forged document. Is this communication protected from disclosure ? Marks : 6

ಒಬ್ಬ ಕಕ್ಷಿದಾರನು ಒಂದು ಮೋಸದ ದಾಖಲಾತಿಯಿಂದ ಸ್ವತ್ತೊಂದನ್ನು ಪಡೆದುಕೊಳ್ಳುವ ಇಂಗಿತವನ್ನು ತನ್ನ ವಕೀಲನಿಗೆ ಹೇಳಿದ್ದಾನೆ. ಈ ಸಂವಾದವು ಬಹಿರಂಗಗೊಳ್ಳುವಿಕೆಯಿಂದ ಮುಕ್ತವಾಗಿದೆಯೇ ?

OR/ಅಥವಾ

(b) Write a note on leading questions. Marks : 6

ಉತ್ತರ ಸೂಚಕ ಪ್ರಶ್ನೆಗಳ ಕುರಿತು ಟಿಪ್ಪಣಿ ಬರೆಯಿರಿ.

---



**VI Semester 3 Year LL.B./VIII Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, March/April 2023 (Dec. 2022)**

# LAW OF EVIDENCE

Duration : 3 Hours Max. Marks : 80

**Instructions :** **1. Answer all five Units.**

**2. One essay type question and one short note/problem is compulsory from each Unit.**

**3. In each question Part (a) carries 10 marks and Part (b) carries 6 marks.**

UNIT – I

Q. No. 1. (a) Explain the meaning and types of evidence. Marks : 10

ಸಾಕ್ಷ್ಯದ ಅರ್ಥ ಮತ್ತು ವಿಧಗಳನ್ನು ವಿವರಿಸಿ.

OR/ಅಥವಾ

(a) Explain the relevancy of facts showing occasion, cause or effects. Marks : 10

ಸಂದರ್ಭ, ಕಾರಣ ಅಥವಾ ಪರಿಣಾಮಗಳನ್ನು ತೋರಿಸುವ ಘಟನೆಗಳ ಸುಸಂಬದ್ಧತೆಯನ್ನು ವಿವರಿಸಿರಿ.

Q. No. 1. (b) 'A' is accused of killing his friend 'B'. Prosecution has adduced evidence to the effect that 'A' owed a huge amount of loan to 'B'. Is this evidence relevant ? Marks : 6

'ಅ' ನು ತನ್ನ ಸ್ನೇಹಿತ 'ಬ' ನನ್ನು ಕೊಲೆ ಮಾಡಿದ ಆರೋಪಿಯಾಗಿದ್ದಾನೆ. 'ಅ' ನು 'ಬ' ನಿಗೆ ಸಾಕಷ್ಟು ಮೊತ್ತದ ಸಾಲಕ್ಕೆ ಬಾಧ್ಯನಾಗಿದ್ದನೆಂಬ ಘಟನೆ ಕುರಿತಾಗಿ ಅಭಿಯೋಜನೆಯು ಸಾಕ್ಷ್ಯ ಸಲ್ಲಿಸಿದೆ. ಈ ಸಾಕ್ಷ್ಯವು ಸುಸಂಬದ್ಧವೇ ?

OR/ಅಥವಾ

(b) 'A' is accused of committing a crime at Belagavi on 02-02-2022 at 11 AM. But 'A' was not there is Belagavi on the said date as he went to participate in a reality show at Bengaluru. Can he prove it ? Marks : 6

ದಿನಾಂಕ 02-02-2022 ರಂದು ಬೆಳಗಿನ ಜಾವ 11 AM ಗಂಟೆಗೆ 'ಅ' ನು ಬೆಳಗಾವಿಯಲ್ಲಿ ಅಪರಾಧ ಮಾಡಿರುವ ಆರೋಪಿಯಾಗಿದ್ದಾನೆ. ಆದರೆ ಅದೇ ದಿವಸ ಅವನು ಬೆಳಗಾವಿಯಲ್ಲಿರಲಿಲ್ಲ ಮತ್ತು ಬೆಂಗಳೂರಿನಲ್ಲಿ ರಿಯಾಲಿಟಿ ಶೋದಲ್ಲಿ ಭಾಗಿಯಾಗಿದ್ದನು. ಇದನ್ನು ಅತ ರುಜುವಾತುಗೊಳಿಸಬಹುದೇ ?

## UNIT – II

Q. No. 2. (a) Explain the general principles regarding relevancy of judgements. Marks : 10

ತೀರ್ಪುಗಳ ಸುಸಂಬದ್ಧತೆಗೆ ಸಂಬಂಧಿಸಿದ ಸಾಮಾನ್ಯ ತತ್ವಗಳನ್ನು ವಿವರಿಸಿ.

OR/ಅಥವಾ

(a) Define confession and distinguish it from admissions. Marks : 10

ತಪ್ಪೊಪ್ಪಿಗೆಯನ್ನು ವ್ಯಾಖ್ಯಾನಿಸಿ ಮತ್ತು ಇದನ್ನು ಒಪ್ಪುವಿಕೆಗಳಿಂದ ವ್ಯತ್ಯಾಸಿಸಿ.

Q. No. 2. (b) 'A' sues 'B' for Rs. 1,000 and shows entries in his account books showing 'B' to be indebted to him to this amount. Are these entries sufficient and relevant to prove debt ? Marks : 6

'ಅ'ನು 1,000 ರೂಪಾಯಿಗಳಿಗಾಗಿ 'ಬ' ನ ವಿರುದ್ಧ ದಾವೆ ಹಾಕಿ ತನ್ನ ಖಾತಾ ಪುಸ್ತಕಗಳಲ್ಲಿ 'ಬ' ನು ತನಗೆ ಈ ಮೊತ್ತಕ್ಕೆ ಸಾಲಗಾರನಾಗಿರುವುದನ್ನು ದಾಖಲಿಸಿರುವುದನ್ನು ತೋರಿಸಿದ್ದಾನೆ. ಈ ದಾಖಲೆಗಳು ಸಾಲವನ್ನು ರುಜುವಾತು ಮಾಡಲು ಸಮಂಜಸ ಮತ್ತು ಸಮರ್ಪಕವೇ ?

OR/ಅಥವಾ

(b) A is accused of killing B by beating with a club. Eye witnesses testified to one blow upon the head of B but medical evidence has recorded four external injuries on his head. Which version is reliable by court ? Marks : 6

'ಅ' ನು 'ಬ' ನನ್ನು ಬಡಿಗೆಯಿಂದ ಹೊಡೆದು ಸಾಯಿಸಿದ ಆರೋಪಿಯಾಗಿದ್ದಾನೆ. ಪ್ರತ್ಯಕ್ಷ ಸಾಕ್ಷಿದಾರರು 'ಬ' ನ ತಲೆಗೆ ಒಂದು ಬಾಹ್ಯ ಪ್ರಹಾರವೆಂದು ಹೇಳಿದ್ದು ವೈದ್ಯಕೀಯ ಸಾಕ್ಷ್ಯವು ನಾಲ್ಕು ಬಾಹ್ಯ ಪ್ರಹಾರವೆಂದು ಹೇಳುತ್ತಿದೆ. ನ್ಯಾಯಾಲಯ ಯಾವುದನ್ನು ಅವಲಂಬಿಸಬಹುದು ?

## UNIT – III

Q. No. 3. (a) Explain the rule that oral evidence must in all cases be direct. State exceptions. Marks : 10

ಎಲ್ಲಾ ಸಂದರ್ಭಗಳಲ್ಲಿಯೂ ಮೌಖಿಕ ಸಾಕ್ಷ್ಯ ನೇರವಾಗಿರತಕ್ಕದ್ದು ಎಂಬ ನಿಯಮವನ್ನು ವಿವರಿಸಿ. ಅಪವಾದಗಳನ್ನು ಹೇಳಿರಿ.

OR/ಅಥವಾ

(a) What is secondary evidence ? Explain the rules regarding the proof of attested documents. Marks : 10

ದ್ವಿತೀಯಕ ಸಾಕ್ಷ್ಯವೆಂದರೇನು ? ಅಭಿಪ್ರಮಾಣಕ್ಕೊಳಪಟ್ಟ ದಸ್ತಾವೇಜಿನ ರುಜುವಾತಿನ ನಿಯಮಗಳನ್ನು ವಿವರಿಸಿ.



Q. No. 3. (b) Write a note on public documents. Marks : 6

ಸಾರ್ವಜನಿಕ ದಸ್ತಾವೇಜುಗಳ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

(b) 'A' agrees in writing to pay Rs. 1,000 to 'B' on 01-03-2022. At the same time an oral agreement was made to the effect that the amount shall not be paid till 31-03-2022. Can this oral agreement be proved ? Marks : 6

'ಅ' ನು 'ಬ' ನಿಗೆ ದಿನಾಂಕ 01-03-2022 ರಂದು 1,000 ರೂಪಾಯಿಗಳನ್ನು ಕೊಡುವುದಾಗಿ ಬರವಣಿಗೆಯಲ್ಲಿ ಒಪ್ಪಿಕೊಂಡಿದ್ದಾನೆ. ಆದರೆ ಅದೇ ಸಮಯದಲ್ಲಿ ಮೌಖಿಕ ಒಪ್ಪಂದವಾಗಿದ್ದು ಅದರನ್ವಯ 31-03-2022 ರವರೆಗೆ ಆ ಹಣವನ್ನು 'ಬ' ನಿಗೆ ಕೊಡುವಂತಿಲ್ಲವೆಂದು ಒಪ್ಪಲಾಗಿದೆ. ಈ ಮೌಖಿಕ ಒಪ್ಪಂದವನ್ನು ರುಜುವಾತು ಪಡಿಸಬಹುದೇ ?

## UNIT – IV

Q. No. 4. (a) What is burden of proof ? On whom it lies ? Marks : 10

ರುಜುವಾತಿನ ಭಾರವೆಂದರೇನು ? ಇದು ಯಾರ ಮೇಲಿರುತ್ತದೆ ?

OR/ಅಥವಾ

(a) What is estoppel ? Explain the estoppel of tenants. Marks : 10

ಪ್ರತಿಬಂಧವೆಂದರೇನು ? ಗೇಣಿದಾರರ ಪ್ರತಿಬಂಧವನ್ನು ವಿವರಿಸಿ.

Q. No. 4. (b) 'A' sues 'B' for money on a bond, but 'B' says that it was obtained by fraud. 'A' denies the fraud. On whom the burden of proof lies ? Marks : 6

'ಅ' ನು ಒಂದು ಬಾಂಡಿನನ್ವಯ ಹಣಕ್ಕಾಗಿ 'ಬ' ನ ಮೇಲೆ ದಾವೆ ಹಾಕಿದ್ದಾನೆ, ಆದರೆ 'ಬ' ನು ಈ ಬಾಂಡನ್ನು ಮೋಸದಿಂದ ಬರೆಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾನೆ. 'ಅ' ನು ಮೋಸವನ್ನು ಅಲ್ಲಗಳೆಯುತ್ತಾನೆ. ಯಾರ ಮೇಲೆ ರುಜುವಾತಿನ ಭಾರ ಇರುತ್ತದೆ ?

OR/ಅಥವಾ

(b) Write a note on presumptions. Marks : 6

ಪೂರ್ವಭಾವನೆಗಳ ಕುರಿತಾಗಿ ಟಿಪ್ಪಣಿ ಬರೆಯಿರಿ.

VI Semester 3 Yr. LL.B./VIII Semester 5 Year B.Com. LL.B./B.B.A. LL.B./ B.A. LL.B. (Maj.-Min. System) Examination, March/April 2024 (Odd Sem.)

# LAW OF EVIDENCE

Duration : 3 Hours Max. Marks : 80

**Instructions :** **1. Answer all five Units.**
**2. One essay type and short note/problems is compulsory from each Unit.**
**3. Figures to the right indicate marks.**
**4. Answer should be written either in English or Kannada completely.**

## UNIT – I

Q. No. 1. a) What is evidence ? Explain the importance of circumstantial evidence. Marks : 10

ಸಾಕ್ಷ್ಯ ಎಂದರೇನು ? ಸಾಂದರ್ಭಿಕ ಸಾಕ್ಷ್ಯದ ಮಹತ್ವವನ್ನು ವಿವರಿಸಿರಿ.

OR/ಅಥವಾ

Q. No. 1. a) Define admissions. State the persons whose admissions are relevant. Marks : 10

ಒಪ್ಪುವಿಕೆಗಳನ್ನು ವ್ಯಾಖ್ಯಾನಿಸಿರಿ ಮತ್ತು ಯಾವ ವ್ಯಕ್ತಿಗಳ ಒಪ್ಪುವಿಕೆಗಳು ಸುಸಂಬದ್ಧವಾಗುವುದೆಂಬುದನ್ನು ತಿಳಿಸಿರಿ.

Q. No. 1. b) Write a note on 'Fact in issue'. Marks : 6

'ವಿವಾದಾಂಶದಲ್ಲಿನ ವಾಸ್ತವಿಕೆ'ಗಳ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 1. b) Write a note on 'Direct evidence'. Marks : 6

'ನೇರ ಸಾಕ್ಷಿ' ಬಗ್ಗೆ ಟಿಪ್ಪಣಿ ಬರೆಯಿರಿ.

UNIT – II

Q. No. 2. a) Explain the provisions relating to expert evidence. Marks : 10
ಪರಿಣಿತರ ಸಾಕ್ಷ್ಯಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

Q. No. 2. a) Explain the circumstances in which judgements of the courts become relevant. Marks : 10
ನ್ಯಾಯಾಲಯದ ತೀರ್ಪುಗಳು ಸುಸಂಬದ್ಧವಾಗುವ ಸಂದರ್ಭಗಳನ್ನು ವಿವರಿಸಿರಿ.

Q. No. 2. b) Write a short note on 'confession'. Marks : 6
'ತಪ್ಪೊಪ್ಪಿಗೆ' ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 2. b) Write a note on 'Dying declaration'. Marks : 6
'ಮರಣ ಕಾಲಿಕ ಹೇಳಿಕೆ' ಬಗ್ಗೆ ಟಿಪ್ಪಣಿ ಬರೆಯಿರಿ.

UNIT – III

Q. No. 3. a) Define secondary evidence and state the cases in which secondary evidence relating to documents may be given. Marks : 10
ದ್ವಿತೀಯಕ ಸಾಕ್ಷ್ಯವನ್ನು ವ್ಯಾಖ್ಯಾನಿಸಿರಿ ಮತ್ತು ಯಾವ ಸಂದರ್ಭಗಳಲ್ಲಿ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ದ್ವಿತೀಯಕ ಸಾಕ್ಷ್ಯ ಕೊಡಬಹುದೆಂಬುದನ್ನು ತಿಳಿಸಿರಿ.

OR/ಅಥವಾ

Q. No. 3. a) Explain the relevancy of character evidence in civil and criminal cases. Marks : 10
ದಿವಾನಿ ಹಾಗೂ ಅಪರಾಧಿಕ ಪ್ರಕರಣಗಳಲ್ಲಿ ಶೀಲ ಸಾಕ್ಷ್ಯದ ಸುಸಂಬದ್ಧತೆಯನ್ನು ವಿವರಿಸಿರಿ.

Q. No. 3. b) Write a note on 'Oral evidence'. Marks : 6
'ಮೌಖಿಕ ಸಾಕ್ಷ್ಯ'ದ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 3. b) Write a note on Primary evidence as to documents. Marks : 6
ದಸ್ತಾವೇಜಿಗೆ ಸಂಬಂಧಿಸಿದ ಪ್ರಾಥಮಿಕ ಸಾಕ್ಷ್ಯದ ಕುರಿತು ಟಿಪ್ಪಣಿ ಬರೆಯಿರಿ.



UNIT – IV

Q. No. 4. a) Explain the presumptions to legitimacy of child and dowry death. Marks : 10
ಮಗುವಿನ ಧರ್ಮಜತ್ವದ ಹಾಗೂ ವರದಕ್ಷಿಣೆ ಸಾವುಗಳ ಪ್ರಕರಣಗಳಲ್ಲಿ ಪೂರ್ವಭಾವನೆಗಳನ್ನು ವಿವರಿಸಿರಿ.

OR/ಅಥವಾ

Q. No. 4. a) What is estoppel ? Discuss the variant kinds of estoppel. Marks : 10
ವಿಬಂಧ (ಬಾಯಿ ಕಟ್ಟುವಿಕೆ) ಎಂದರೇನು ? ವಿಬಂಧದ ವಿವಿಧ ಪ್ರಕಾರಗಳನ್ನು ಚರ್ಚಿಸಿ.

Q. No. 4. b) Write a note on burden of proof. Marks : 6
ರುಜುವಾತಿನ ಹೊಣೆ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 4. b) Write a note on tenancy estoppel. Marks : 6
ಗೇಣಿಯ ವಿಬಂಧ ಕುರಿತು ಟಿಪ್ಪಣಿ ಬರೆಯಿರಿ.

UNIT – V

Q. No. 5. a) Explain the scope and extent of privilege conferred on professional communications as envisaged in the Indian Evidence Act. Marks : 10
ಭಾರತೀಯ ಸಾಕ್ಷಿ ಅಧಿನಿಯಮದಲ್ಲಿ ಸೂಚಿಸಿರುವಂತೆ ವೃತ್ತೀಯ ಸಂವಹನಗಳ ವಿಶೇಷಾಧಿಕಾರದ ವ್ಯಾಪ್ತಿ ಮತ್ತು ಗಾತ್ರವನ್ನು ವಿವರಿಸಿರಿ.

OR/ಅಥವಾ

Q. No. 5. a) Discuss the scope of cross-examination and explain the questions lawful in cross-examination. Marks : 10
ಪಾಟಿ ಸವಾಲಿನ ವ್ಯಾಪ್ತಿಯ ಬಗ್ಗೆ ಚರ್ಚಿಸಿ ಮತ್ತು ಪಾಟಿ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳ ಬಗ್ಗೆ ವಿವರಿಸಿ.

Q. No. 5. b) Write a note on leading question. Marks : 6
ಉತ್ತರ ಸೂಚಕ ಪ್ರಶ್ನೆಗಳ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. b) Write a note on evidence of accomplice. Marks : 6
ಸಹ ಅಪಾದಿತ ಸಾಕ್ಷಿದಾರನ ಸಾಕ್ಷ್ಯದ ಕುರಿತು ಟಿಪ್ಪಣಿ ಬರೆಯಿರಿ.

0601/1001/2075

**VI Semester 3 Year LL.B./X Semester 5 Year B.A. LL.B./B.B.A. LL.B./ B.A. LL.B. (Maj.-Min. System)/B.Com. LL.B. Examination, September/October 2023 (June 2023)**

**LAW OF EVIDENCE**

Duration : 3 Hours Max. Marks : 100

**Instructions :**
1. **Answer Q. No. 9 and any five of the remaining.**
2. **Q. No. 9 carries 20 marks and remaining questions carry 16 marks each.**
3. **Answers must be written either in English or Kannada completely.**

Q. No. 1. Explain the doctrine of 'Res-gestae' with the help of decided cases. Marks : 16

ದೃಷ್ಟಾಂತಗಳೊಡನೆ 'ರೆಸ್‌ಜೆಸ್ಟೆ' ನಿಯಮದ ಬಗ್ಗೆ ವಿವರಿಸಿ.

Q. No. 2. 'Men may lie but circumstances will not lie' – Comment with relevant cases. Marks : 16

'ಮನುಷ್ಯ ಸುಳ್ಳು ಹೇಳಬಹುದು ಆದರೆ ಸಂದರ್ಭಗಳು ಸುಳ್ಳು ಹೇಳಲಾರವು' – ಸೂಕ್ತ ಪ್ರಕರಣಗಳೊಂದಿಗೆ ಟೀಕಿಸಿ.

Q. No. 3. Explain the circumstances in which judgements of courts become relevant. Marks : 16

ನ್ಯಾಯಾಲಯಗಳ ತೀರ್ಪುಗಳು ಸುಸಂಬದ್ಧವಾಗುವ ಸಂದರ್ಭಗಳನ್ನು ವಿವರಿಸಿ.

Q. No. 4. Who is an expert ? Explain matters in relation to which opinions of experts becomes relevant. Marks : 16

ಪರಿಣತ ಎಂದರೆ ಯಾರು ? ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಪರಿಣತರ ಅಭಿಪ್ರಾಯಗಳು ಸುಸಂಬದ್ಧವೆಂಬುದನ್ನು ವಿವರಿಸಿ.

Q. No. 5. What is 'Hearsay evidence' ? Discuss the exceptions to this rule ? Marks : 16

'ವದಂತಿ ಸಾಕ್ಷ್ಯ' ಎಂದರೇನು ? ಈ ನಿಯಮಕ್ಕೆ ಇರುವ ಅಪವಾದಗಳನ್ನು ಚರ್ಚಿಸಿ.

Q. No. 6. Explain the presumptions in cases of dowry death and legitimacy of child. Marks : 16

ವರದಕ್ಷಿಣೆ ಸಾವು ಹಾಗೂ ಮಗುವಿನ ಧರ್ಮಜತ್ವದ ಕುರಿತು ಇರುವ ಪೂರ್ವಭಾವನೆಯ ಬಗ್ಗೆ ವಿವರಿಸಿ.

Q. No. 7. Discuss the scope of cross-examination. Explain the questions lawful in cross-examination. Marks : 16

ಪಾಟೀಸವಾಲಿನ ವ್ಯಾಪ್ತಿಯ ಬಗ್ಗೆ ಚರ್ಚಿಸಿ. ಪಾಟೀಸವಾಲಿನಲ್ಲಿ ಕಾನೂನುಬದ್ಧವಾಗಿ ಕೇಳಬಹುದಾದ ಪ್ರಶ್ನೆಗಳ ಬಗ್ಗೆ ವಿವರಿಸಿ.

Q. No. 8. Write short notes on **any two** : Marks : 2x8=16

ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ :

(a) Hostile witness.

ಪ್ರತಿಕೂಲ ಸಾಕ್ಷಿ.

(b) Court questions.

ನ್ಯಾಯಾಲಯದ ಪ್ರಶ್ನೆಗಳು.

(c) Confession.

ತಪ್ಪೊಪ್ಪಿಗೆ.

Q. No. 9. Solve **any two** of the following : Marks : 2x10=20

ಯಾವುದೇ ಎರಡನ್ನು ಬಗೆಹರಿಸಿ :

(a) A 5 year old girl appears as a witness and states that the accused, her step mother, had thrown her and her younger sister into a well. Is she competent to testify ?

ಒಬ್ಬ 5 ವರ್ಷದ ಬಾಲಕಿಯು ಸಾಕ್ಷಿದಾರಳಾಗಿ ನ್ಯಾಯಾಲಯದಲ್ಲಿ ಹಾಜರಾಗಿ, ಅಪರಾಧಿ ಸ್ಥಾನದಲ್ಲಿರುವ ತನ್ನ ಮಲತಾಯಿಯು ತನ್ನನ್ನು ಹಾಗೂ ತನ್ನ ಕಿರಿಯ ಸಹೋದರಿಯನ್ನು ಬಾವಿಗೆ ತಳ್ಳಿದ್ದಳು ಎಂದು ನುಡಿಯುತ್ತಾಳೆ. ಆ ಬಾಲಕಿಯು ಸಾಕ್ಷಿ ನೀಡಲು ಅರ್ಹಳೇ ?

(b) 'A' wants to adduce oral evidence to produce genuineness of a document. Can he do it ?

ಒಂದು ದಸ್ತಾವೇಜಿನ ಸಿಂಧುತ್ವವನ್ನು ಸಾಬೀತುಪಡಿಸಲು 'ಅ'ನು ಮೌಖಿಕ ಸಾಕ್ಷಿ ಸಲ್ಲಿಸಲು ಬಯಸುತ್ತಾನೆ. ಅವನು ಹಾಗೆ ಮಾಡಬಹುದೇ ?

(c) The question is whether Ravi committed a crime at Calcutta. On the same day, Ravi was at Lahor. Is this fact relevant ?

ರವಿಯು ಕಲ್ಕತ್ತದಲ್ಲಿ ಅಪರಾಧ ಎಸಗಿದ್ದಾನೆಯೇ ಎಂಬುದು ಪ್ರಶ್ನೆಯಾಗಿದೆ. ಅದೇ ದಿನ ರವಿಯು ಲಾಹೋರ್‌ನಲ್ಲಿ ಇದ್ದ ಎಂಬ ಸಂಗತಿಯು ಸುಸಂಬದ್ಧವೇ ?

---

VI Semester 3 Year LL.B./X Semester 5 Year B.Com. LL.B./B.A. LL.B./B.A. LL.B. (Maj.-Min. System)/B.B.A. LL.B. Examination, March/April 2024 (Odd Sem.)

# LAW OF EVIDENCE

Duration : 3 Hours Max. Marks : 100

**Instructions :** 1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answer should be written either in English or Kannada completely.**

Q. No. 1. Define evidence. Explain direct and circumstantial evidence. What are the test required when a case rest entirely on circumstantial evidence ? Substantiate your answer with the help of decided cases. Marks : 16

ಸಾಕ್ಷ್ಯವನ್ನು ವ್ಯಾಖ್ಯಾನಿಸಿರಿ. ನೇರ ಮತ್ತು ಸಾಂದರ್ಭಿಕ ಸಾಕ್ಷ್ಯವನ್ನು ವಿವರಿಸಿರಿ. ಒಂದು ಪ್ರಕರಣವು ಸಂಪೂರ್ಣವಾಗಿ ಸಾಂದರ್ಭಿಕ ಸಾಕ್ಷ್ಯದ ಮೇಲೆ ನಿಂತಾಗ ಯಾವ ಪರೀಕ್ಷೆಯ ಅಗತ್ಯವಿದೆ ? ನಿರ್ಧರಿಸಿದ ಪ್ರಕರಣಗಳ ಸಹಾಯದಿಂದ ನಿಮ್ಮ ಉತ್ತರವನ್ನು ಸಮರ್ಥಿಸಿ.

Q. No. 2. What is meant by relevancy of facts ? Explain 'Introductory facts' and 'Explanatory facts' under the Indian Evidence Act. What is the evidentiary value of identification parade ? Marks : 16

ಸುಸಂಬದ್ಧತೆಯ ಸಂಗತಿಗಳೆಂದರೆ ಏನು ? ಭಾರತೀಯ ಸಾಕ್ಷ್ಯ ಕಾಯಿದೆ ಅಡಿಯಲ್ಲಿ 'ಪರಿಚಯಾತ್ಮಕ ಸಂಗತಿಗಳು' ಮತ್ತು 'ವಿವರಣಾತ್ಮಕ ಸಂಗತಿಗಳನ್ನು' ವಿವರಿಸಿ. ಗುರುತಿನ ಮೆರವಣಿಗೆಯ ಸಾಕ್ಷಿಯ ಮೌಲ್ಯವೇನು ?

Q. No. 3. Define confession. "Confession must be taken as a whole or rejected as a whole". Explain with exceptions. State its evidentiary value. Marks : 16

ತಪ್ಪೊಪ್ಪಿಗೆಯನ್ನು ವ್ಯಾಖ್ಯಾನಿಸಿ. ''ತಪ್ಪೊಪ್ಪಿಗೆಯನ್ನು ಸಂಪೂರ್ಣವಾಗಿ ತೆಗೆದುಕೊಳ್ಳಬೇಕು (ಪರಿಗಣಿಸಬೇಕು) ಅಥವಾ ಒಟ್ಟಾರೆಯಾಗಿ ತಿರಸ್ಕರಿಸಬೇಕು'' – ಅಪವಾದಗಳೊಂದಿಗೆ ಈ ನಿಯಮವನ್ನು ವಿವರಿಸಿರಿ. ಅದರ ಸಾಕ್ಷ್ಯ ಮೌಲ್ಯವನ್ನು ತಿಳಿಸಿ.

Q. No. 4. "An expert is not a witness of fact. His evidence is really of an advisory character". – In the light of the statement, examine the provision relating to expert evidence under Indian Evidence Act, 1872. Marks : 16

''ತಜ್ಞರು ಸತ್ಯ ಸಂಗತಿಗಳ ಸಾಕ್ಷಿಯಲ್ಲ. ಅವರ ಸಾಕ್ಷ್ಯವು ನಿಜವಾಗಿಯೂ ಸಲಹಾ ಪಾತ್ರವಾಗಿದೆ.'' – ಭಾರತೀಯ ಸಾಕ್ಷ್ಯ ಕಾಯ್ದೆ, 1872 ಅಡಿಯಲ್ಲಿ ತಜ್ಞರ ಸಾಕ್ಷಿಗಳಿಗೆ ಸಂಬಂಧಿಸಿದ ನಿಬಂಧನೆಯನ್ನು ಈ ಹೇಳಿಕೆ ಬೆಳಕಿನಲ್ಲಿ ಚರ್ಚಿಸಿರಿ.

Q. No. 5. "Oral evidence is excluded by documentary evidence". Explain this rule and state the exceptions if any to this rule. Marks : 16

''ಮೌಖಿಕ ಸಾಕ್ಷ್ಯವನ್ನು ದಾಖಲಾತಿ ಸಾಕ್ಷಿಗಳಿಂದ ಹೊರಗಿಡಲಾಗಿದೆ.'' – ಈ ನಿಯಮವನ್ನು ವಿವರಿಸಿರಿ ಮತ್ತು ಈ ನಿಯಮಕ್ಕೆ ಯಾವುದಾದರೂ ಅಪವಾದಗಳಿದ್ದರೆ ಅವುಗಳನ್ನು ತಿಳಿಸಿರಿ.

Q. No. 6. Define Estoppel. State different kinds of Estoppel. Distinguish between Estoppel and Admissions. Marks : 16

ವಿಬಂಧವನ್ನು ವ್ಯಾಖ್ಯಾನಿಸಿರಿ. ವಿವಿಧ ರೀತಿಯ ವಿಬಂಧಗಳನ್ನು ವಿವರಿಸಿರಿ. ವಿಬಂಧಗಳು ಹಾಗೂ ಅಂಗೀಕಾರಗಳ (ಒಪ್ಪಿಗೆಗಳು) ನಡುವಿನ ವ್ಯತ್ಯಾಸವನ್ನು ತಿಳಿಸಿರಿ.

Q. No. 7. Who is an accomplice ? What is the credibility of approver's testimony ? Does it require any corroboration ? Discuss with the help of decided cases. Marks : 16

ಸಹಾಪರಾಧಿ ಎಂದರೆ ಯಾರು ? ಮಾಫಿ ಸಾಕ್ಷಿದಾರನ ಸಾಕ್ಷ್ಯದ ವಿಶ್ವಾಸಾರ್ಹತೆ ಏನು ? ಇದಕ್ಕೆ ಯಾವುದೇ ದೃಢೀಕರಣದ ಅಗತ್ಯವಿದೆಯೇ ? ನಿರ್ಧರಿಸಿದ ಪ್ರಕರಣಗಳ ಸಹಾಯದಿಂದ ಚರ್ಚಿಸಿ.

Q. No. 8. Write short note on **any two** of the following : Marks : 2x8=16

ಕೆಳಗಿನ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Dying declaration.
ಮರಣಕಾಲೀನ ಘೋಷಣೆ.

(b) Patent and latent ambiguities.
ಪೇಟೆಂಟ್ ಮತ್ತು ಸುಪ್ತ ಅಸ್ಪಷ್ಟತೆ.

(c) Burden of proof.
ರುಜುವಾತಿನ ಭಾರ.



Q. No. 9. Solve **any two** of the following problems : Marks : 2x10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿ :

(a) 'A' communicated to informed 'B' in the year 1988 that she had committed theft of the ornaments of her neighbour. Thereafter 'A' and 'B' were married in 1989. In the year 1992, prosecution was started against 'A' in respects of theft of ornaments. 'B' is called to give evidence in this case. Can 'B' disclose the communication made to him by his wife 'A' ? Decide/advice.

'ಎ' 1988 ರಲ್ಲಿ 'ಬಿ'ಗೆ ಅವಳು ತನ್ನ ನೆರೆಹೊರೆಯವರ ಆಭರಣಗಳನ್ನು ಕಳ್ಳತನ ಮಾಡಿದ್ದಾಳೆ ಎಂದು ತಿಳಿಸಿರುತ್ತಾರೆ. ನಂತರ 'ಬಿ' ಮತ್ತು 'ಎ' 1989ರಲ್ಲಿ ವಿವಾಹವಾದರು. 1992 ರಲ್ಲಿ ಆಭರಣಗಳ ಕಳ್ಳತನದ ಆರೋಪ ಅಪರಾಧಕ್ಕೆ ಸಂಬಂಧಿಸಿದಂತೆ 'ಎ' ವಿರುದ್ಧ ಕಾನೂನು ಕ್ರಮವನ್ನು ಪ್ರಾರಂಭಿಸಲಾಯಿತು. ಈ ಪ್ರಕರಣದಲ್ಲಿ ಸಾಕ್ಷ್ಯ ನೀಡಲು 'ಬಿ'ನನ್ನು ಕರೆಯಲಾಯಿತು. 'ಎ' ಮತ್ತು 'ಬಿ' ನಡುವೆ ಅಥವಾ 'ಎ', 'ಬಿ' ಅವರಿಗೆ ಮಾಡಿದ ಸಂವಹನವನ್ನು 'ಬಿ' ಬಹಿರಂಗಪಡಿಸಬಹುದೇ ? ವಿವರಿಸಿ/ನಿರ್ಧರಿಸಿ.

(b) 'A' women prosecutes a man for picking her pocket. Can a question that she had given birth to an illegitimate child 10 years before be asked ? Is it a proper question ? Decide.

'A' ಎಂಬ ಹೆಂಗಸು ಒಬ್ಬ ವ್ಯಕ್ತಿಯ ವಿರುದ್ಧ ಜೇಬು ಕತ್ತರಿಯ ಆರೋಪ ಮಾಡಿ ವಿಚಾರಣೆಗೆ ಒಳಪಡಿಸಿರುತ್ತಾಳೆ. ಈ ವಿಚಾರಣೆಯಲ್ಲಿ ಆಕೆ ಹತ್ತು ವರ್ಷದ ಹಿಂದೆ ಒಂದು ಅಧರ್ಮಜ (illegitimate) ಮಗುವಿಗೆ ಜನ್ಮ ನೀಡಿದ್ದ ಬಗ್ಗೆ ಪ್ರಶ್ನೆಯನ್ನು ಕೇಳಬಹುದೇ ? ಈ ಪ್ರಶ್ನೆಯು ಸೂಕ್ತ ಪ್ರಶ್ನೆಯೇ ? ನಿರ್ಧರಿಸಿ.

(c) 'A' and 'B' were good friends. Suddenly fight ensued between them in a public place. 'A' is accused of beating 'B' with a club. It is shown that the bystanders has advised. 'A' not to beat 'B'. Is this fact relevant ? Advise.

'ಎ' ಮತ್ತು 'ಬಿ' ಇಬ್ಬರು ಒಳ್ಳೆಯ ಸ್ನೇಹಿತರು. ಸಾರ್ವಜನಿಕ ಸ್ಥಳದಲ್ಲಿ ಇಬ್ಬರ ನಡುವೆ ಜಗಳ ಶುರುವಾಗುತ್ತದೆ. ಆ ಸಮಯದಲ್ಲಿ 'ಎ' ಎಂಬುವನು 'ಬಿ'ನನ್ನು ಬಡಿಗೆಯಿಂದ ಬಡಿದಿರುವ ಆರೋಪಕ್ಕೆ ಒಳಗಾಗಿದ್ದಾನೆ. ಹೊಡೆಯುವ ಸಂದರ್ಭದಲ್ಲಿ, ಅಲ್ಲಿ ಸೇರಿದ ಜನರು 'ಎ'ನಿಗೆ 'ಬಿ'ನನ್ನು ಹೊಡೆಯದಂತೆ ಸಲಹೆ ನೀಡಿದರೆಂದು ತೋರಿಸಲಾಗಿದೆ. ಈ ವಾಸ್ತವಿಕತೆಯು ಸುಸಂಬದ್ಧವೇ ? ಸಲಹೆ ನೀಡಿ/ನಿರ್ಧರಿಸಿ.

---

Discuss the law relating to estoppel. Marks : 10

ವಿಬಂಧದ ಬಗ್ಗೆ ಕಾನೂನಿನ ಉಪಬಂಧಗಳನ್ನು ಚರ್ಚಿಸಿ.

Q. No. 4. b) 'A' sues 'B' for money due on a bond. 'B' has admitted the execution of bond, but contends that it was obtained by fraud. 'A' denies it. On whom the burden of proof lies. Marks : 6

'ಅ'ನು ಒಂದು ಬಾಂಡ್‌ನ ಅನ್ವಯ ಬರಬೇಕಾದ ಹಣಕ್ಕಾಗಿ 'ಬ'ನ ವಿರುದ್ಧ ಹೂಡಿದ್ದಾನೆ. 'ಬ'ನು ಆ ಬಾಂಡ್ ಬರೆದುಕೊಟ್ಟಿದ್ದನ್ನು ಒಪ್ಪಿಕೊಂಡು, ಆದರೆ ಅದನ್ನು ಮೋಸದಿಂದ ಬರೆಯಿಸಿಕೊಳ್ಳಲಾಗಿದೆ ಎಂದು ವಾದಿಸುತ್ತಾನೆ. 'ಅ'ನು ಅದನ್ನು ಅಲ್ಲಗಳೆಯುತ್ತಾನೆ. ಯಾರ ಮೇಲೆ ರುಜುವಾತಿನ ಭಾರ ಇರುತ್ತದೆ ?

OR/ಅಥವಾ

Write a note on presumption. Marks : 6

ಪೂರ್ವಭಾವನೆ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – V

Q. No. 5. a) Explain the provisions of Indian Evidence Act relating to competency of witnesses. Marks : 10

ಸಾಕ್ಷಿಗಳ ಸಮರ್ಥತೆ ಕುರಿತು ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಇರುವ ಉಪಬಂಧಗಳನ್ನು ವಿವರಿಸಿ.

OR/ಅಥವಾ

What are privileged communication ? Explain. Marks : 10

ವಿಶೇಷಾಧಿಕಾರ ಸಂವಹನೆಗಳಾವುವು ? ವಿವರಿಸಿ.

Q. No. 5. b) Write a note on 'impeaching credit of witness'. Marks : 6

ಸಾಕ್ಷಿಯ ವಿಶ್ವಾಸಾರ್ಹತೆಗೆ ಧಕ್ಕೆ ತರುವುದರ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Write a note on leading questions. Marks : 6

ಉತ್ತರ ಸೂಚಕ ಪ್ರಶ್ನೆಗಳ ಬಗ್ಗೆ ಟಿಪ್ಪಣಿ ಬರೆಯಿರಿ.

---



**VI Semester 3 Year LL.B./VIII Semester 5 Year B.Com.,LL.B./ B.A.,LL.B. (Maj.-Min. System)/B.B.A.,LL.B. (Even Sem.) Examination, Aug./Sept. 2024**

# LAW OF EVIDENCE

Duration : 3 Hours Max. Marks : 80

**Instructions :**
1. **Answer all five Units.**
2. **One essay type question and short note/problems is compulsory.**
3. **Figures to the right indicate marks.**
4. **Answers should be written either in English or Kannada completely.**

## UNIT – I

Q. No. 1. a) Explain the relevancy of facts forming part of the same transaction with cases. Marks : 10

ಒಂದೇ ವ್ಯವಹರಣೆಯ ಭಾಗವಾಗಿರುವ ವಾಸ್ತವಿಕತೆಗಳ ಸುಸಂಬದ್ಧತೆಯನ್ನು ಪ್ರಕರಣ ಸಹಿತ ವಿವರಿಸಿ.

OR/ಅಥವಾ

Explain the relevancy of facts showing motive preparation and conduct. Marks : 10

ಉದ್ದೇಶ, ಪೂರ್ವ ತಯಾರಿ ಮತ್ತು ನಡತೆಗಳನ್ನು ಸೂಚಿಸುವ ಸಂಗತಿಗಳ ಸುಸಂಬದ್ಧತೆಯನ್ನು ವಿವರಿಸಿ.

Q. No. 1. b) 'A' is accused of a crime prosecution has shown that he absconded from his house immediately after the incident. Can 'A' prove that he had an urgent work at that time ? Marks : 6

'ಅ'ನು ಒಂದು ಅಪರಾಧದ ಆಪಾದಿತನಾಗಿದ್ದಾನೆ ಘಟನೆ ನಡೆದ ತಕ್ಷಣ ಅವನು ಮನೆಯಿಂದ ಪರಾರಿಯಾಗಿರುವುದಾಗಿ ಅಭಿಯೋಜಕರು ತಿಳಿಸಿದ್ದಾರೆ. ಆದರೆ ಆ ಸಮಯದಲ್ಲಿ ತನಗೆ ಬೇರೊಂದು ಅವಶ್ಯ ಕಾರ್ಯವಿತ್ತೆಂದು 'ಅ'ನು ರುಜುವಾತು ಪಡಿಸಬಹುದೇ ?

OR/ಅಥವಾ

'A' is accused of receiving stolen goods knowing them to be stolen. He wants to show that he refused to sell them below market value. Can he do so ? Marks : 6

'ಅ' ನು ಗೊತ್ತಿದ್ದೂ ಕಳ್ಳತನದ ವಸ್ತುಗಳನ್ನು ಸ್ವೀಕರಿಸಿದ ಆರೋಪಿತನಾಗಿದ್ದಾನೆ. ಅವನು ತಾನು ಅವುಗಳನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಮಾರಲು ನಿರಾಕರಿಸಿರುವುದಾಗಿ ರುಜುವಾತುಪಡಿಸಲು ಇಚ್ಛಿಸಿದ್ದಾನೆ. ಅವನು ಹಾಗೆ ಮಾಡಬಹುದೇ ?

UNIT – II

Q. No. 2. a) Explain the provisions relating to expert evidence. Marks : 10

ಪರಿಣಿತರ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಇರುವ ಉಪಬಂಧಗಳನ್ನು ವಿವರಿಸಿ.

OR/ಅಥವಾ

Discuss the law relating to confession. Marks : 10

ತಪ್ಪೊಪ್ಪಿಗೆ ಸಂಬಂಧಿಸಿದ ಕಾನೂನನ್ನು ಚರ್ಚಿಸಿರಿ.

Q. No. 2. b) 'A' was called to police station for interrogation. During interrogation he complained of severe stomach pain. He was taken to hospital in a police van, while in hospital he confessed to a doctor that he committed robbery. Is the confession admissible ? Marks : 6

'ಅ'ನನ್ನು ವಿಚಾರಣೆಗಾಗಿ ಪೋಲಿಸ್ ಠಾಣೆಗೆ ಕರೆಸಲಾಯಿತು. ವಿಚಾರಣೆಯ ಸಮಯದಲ್ಲಿ 'ಅ'ನು ಹೊಟ್ಟೆನೋವೆಂದು ದೂರಿದನು. ಪೋಲಿಸ್ ವಾಹನದಲ್ಲಿ ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯಲ್ಲಿರುವಾಗ ತಾನು ಸುಲಿಗೆ ಮಾಡಿರುವುದಾಗಿ ವೈದ್ಯರ ಮುಂದೆ ತಪ್ಪೊಪ್ಪಿಗೆ ನೀಡಿದ್ದಾನೆ. ಈ ತಪ್ಪೊಪ್ಪಿಗೆಯು ಅಂಗೀಕಾರಕ್ಕೆ ಯೋಗ್ಯವೇ ?

OR/ಅಥವಾ

'A' has obtained a decree for the possession of land against 'B'. B's son 'C' has murdered 'A' in consequence. Is the existence of decree relevant ? Marks : 6

'ಅ'ನು 'ಬ'ನ ವಿರುದ್ಧ ಭೂಮಿ ಸ್ವಾಧೀನತೆಯ ಡಿಕ್ರಿ ಪಡೆದಿದ್ದಾನೆ. ಪರಿಣಾಮವಾಗಿ 'ಬ'ನ ಮಗ 'ಕ'ನು 'ಅ'ನನ್ನು ಕೊಂದಿದ್ದಾನೆ. ಇಲ್ಲಿ ಡಿಕ್ರಿಯು ಸುಸಂಬದ್ಧವೇ ?



UNIT – III

Q. No. 3. a) Explain the circumstances in which judgements of court becomes relevant. Marks : 10

ನ್ಯಾಯಾಲಯದ ತೀರ್ಪುಗಳು ಸುಸಂಬದ್ಧವಾಗುವ ಸಂದರ್ಭಗಳನ್ನು ವಿವರಿಸಿ.

OR/ಅಥವಾ

What is primary and secondary evidence ? When secondary evidence becomes admissible. Marks : 10

ಪ್ರಾಥಮಿಕ ಸಾಕ್ಷಿ ಮತ್ತು ದ್ವಿತೀಯ ಸಾಕ್ಷಿ ಎಂದರೇನು ? ದ್ವಿತೀಯ ಸಾಕ್ಷಿಯು ಯಾವಾಗ ಸ್ವೀಕಾರಾರ್ಹವಾಗುತ್ತದೆ ?

Q. No. 3. b) 'A' wants to prove a will. But both attesting witnesses to that will are dead. Advise him. Marks : 6

'ಅ'ನು ಒಂದು ಮರಣಶಾಸನವನ್ನು ರುಜುವಾತು ಪಡಿಸಬೇಕೆಂದಿದ್ದಾನೆ. ಆದರೆ ಆ ಮರಣ ಶಾಸನಕ್ಕಿರುವ ಎರಡೂ ಸಾಕ್ಷಿದಾರರು ಸಾವನ್ನಪ್ಪಿದ್ದಾರೆ. ಅವನಿಗೆ ಸಲಹೆ ನೀಡಿರಿ.

OR/ಅಥವಾ

'A' wants to produce document which is destroyed by fire. Can he produce the photo copy of that document to prove it ? Marks : 6

ಬೆಂಕಿಯಿಂದ ನಾಶವಾದ ದಾಸ್ತಾವೇಜನ್ನು 'ಅ'ನು ರುಜುವಾತು ಪಡಿಸಲು ಬಯಸಿದ್ದಾನೆ. ಆ ದಾಸ್ತಾವೇಜಿನ ಫೋಟೋ ಪ್ರತಿ ಸಲ್ಲಿಸಿ ಅವನು ಆ ದಾಸ್ತಾವೇಜನ್ನು ರುಜುವಾತು ಪಡಿಸಬಹುದೇ ?

UNIT – IV

Q. No. 4. a) Explain the scope of 113 A and 114 A under Indian Evidence Act. Marks : 10

ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಕಲಂ 113 A ಹಾಗೂ 114 A ವ್ಯಾಪ್ತಿಯನ್ನು ವಿವರಿಸಿ.

OR/ಅಥವಾ

0601/1001/2075

**VI Semester 3 Years LL.B./X Semester 5 Year B.Com. LL.B./B.A.LL.B./ B.A.LL.B. (Maj.-Min. System)/B.B.A.LL.B. (Even Sem.) Examination, August/September 2024**

# LAW OF EVIDENCE

Duration : 3 Hours

Max. Marks : 100

**Instructions : 1. Answer Q. No. 9 and any five of the remaining questions.**

**2. Q. No. 9 carries 20 marks and the remaining questions carries 16 marks each.**

**3. Answer should be written either in English or Kannada completely.**

Q. No. 1. Define Motive. Discuss the relevancy of fact relating to motive, preparation, previous and subsequent conduct with suitable illustrations and decided cases. Marks : 16

ಧ್ಯೇಯ ಎಂಬ ಪದವನ್ನು ವ್ಯಾಖ್ಯಾನಿಸಿರಿ. ಧ್ಯೇಯ, ಸಿದ್ಧತೆ, ಪೂರ್ವ ಮತ್ತು ನಂತರದ ನಡೆಗೆ ಸಂಬಂಧಿಸಿದ ಸಂಗತಿಗಳ ಸುಸಂಬದ್ಧತೆಯನ್ನು ಸೂಕ್ತ ಉದಾಹರಣೆಗಳು ಮತ್ತು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿರಿ.

Q. No. 2. What are admissions ? Who can make them ? What is the evidentially value of admission ? Distinguish between admission and confession. Marks : 16

ಒಪ್ಪುವಿಕೆಗಳನ್ನು ವ್ಯಾಖ್ಯಾನಿಸಿ. ಯಾರು ಅವುಗಳನ್ನು ಮಾಡಬಹುದು ? ಒಪ್ಪುವಿಕೆಗಳ ಸಾಕ್ಷ್ಯದ ಮೌಲ್ಯ ಏನು ? ಒಪ್ಪುವಿಕೆಯ ಮತ್ತು ತಪ್ಪೊಪ್ಪಿಗೆಯ ವ್ಯತ್ಯಾಸ.

Q. No. 3. What is character evidence ? Discuss the relevancy of character evidence in civil and criminal cases. Marks : 16

ಚರಿತ್ರ್ಯ/ನಡತೆ ಸಾಕ್ಷ್ಯ ಎಂದರೇನು ? ದಿವಾನಿ ಮತ್ತು ಅಪರಾಧಿಕ ಪ್ರಕರಣಗಳಲ್ಲಿ ಚರಿತ್ರ್ಯ ಸಾಕ್ಷ್ಯದ ಸುಸಂಬದ್ಧತೆಯನ್ನು ವಿವರಿಸಿರಿ.

Q. No. 4. What do you mean by 'primary evidence' and 'secondary evidence' ? Enumerate the circumstances under which secondary evidence relating to documents is admissible. Marks : 16

'ಪ್ರಾಥಮಿಕ ಸಾಕ್ಷ್ಯ' ಮತ್ತು 'ದ್ವಿತೀಯ ಸಾಕ್ಷ್ಯ' ಎಂದರೇನು ? ಯಾವ ಸಂದರ್ಭಗಳಲ್ಲಿ ದ್ವಿತೀಯ ಸಾಕ್ಷಿಯನ್ನು ನ್ಯಾಯಾಲಯವು ದಾಖಲಾತಿಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬಹುದು ?

Q. No. 5. Explain burden of proof. On whom burden of proof lies ? Explain in detail the provision of law relating to burden of proof. Marks : 16

ಪುರಾವೆಯ ಭಾರವನ್ನು ವಿವರಿಸಿ. ಪುರಾವೆಯ ಹೊರೆ ಯಾರ ಮೇಲಿದೆ ? ಪುರಾವೆಯ ಹೊರೆಗೆ ಸಂಬಂಧಿಸಿದ ಕಾನೂನಿನ ನಿಬಂಧನೆಯನ್ನು ವಿವರವಾಗಿ ವಿವರಿಸಿರಿ.

Q. No. 6. What do you mean by hearsay evidence ? "Hearsay evidence is not admissible." Explain. Discuss the exceptions to this general rule under evidence law. Marks : 16

ಕೇಳಿ ತಿಳಿದ ಸಾಕ್ಷಿಗಳೆಂದರೆ ಏನು ? ''ಕೇಳಿ ತಿಳಿದ ಸಾಕ್ಷ್ಯವು ಸ್ವೀಕಾರಾರ್ಹವಲ್ಲ.'' ವಿವರಿಸಿ. ಸಾಕ್ಷ್ಯ ಕಾನೂನಿನ ಅಡಿಯಲ್ಲಿ ಈ ಸಾಮಾನ್ಯ ನಿಯಮಕ್ಕೆ ವಿನಾಯಿತಿಗಳನ್ನು ಚರ್ಚಿಸಿ.

Q. No. 7. Define the term cross-examination. What are the procedure to be followed in cross-examination during the examination of child witness ? What are leading questions ? Marks : 16

ಪುನರ್ ವಿಚಾರಣೆ ಎಂಬ ಪದವನ್ನು ವ್ಯಾಖ್ಯಾನಿಸಿ. ಮಕ್ಕಳ ಸಾಕ್ಷ್ಯವನ್ನು ಪುನರ್ ವಿಚಾರಣೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು ಯಾವುವು ? ಉತ್ತರ ಸೂಚಕ ಪ್ರಶ್ನೆಗಳೆಂದರೇನು ?

Q. No. 8. Write short note on **any two** of the following : Marks : 2×8=16

ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Electronic evidence
ಎಲೆಕ್ಟ್ರಾನಿಕ್ ಸಾಕ್ಷ್ಯಗಳು

(b) Estoppel
ವಿಬಂಧಗಳು

(c) Presumption as to dowry death.
ವರದಕ್ಷಿಣೆ ಸಾವುಗಳ ಪೂರ್ವ ಭಾವನೆಗಳು.



Q. No. 9. Solve **any two** of the following problems : Marks : 2×10=20

ಯಾವುದಾದರೂ ಎರಡು ಸಮಸ್ಯೆಗಳನ್ನು ಬಗೆಹರಿಸಿ :

(a) 'A' a client says to 'B' an attorney "I wish to murder 'C' on which I request you to defend me." Is this communication protected from disclosure ?

'ಅ' ಎಂಬ ಕಕ್ಷಿಗಾರನು 'ಬ' ಎಂಬ ನ್ಯಾಯವಾದಿಯೊಂದಿಗೆ ತಾನು 'ಕ'ನನ್ನು ಕೊಲೆ ಮಾಡವುದಾಗಿ ಬಯಸಿದ್ದು ತನ್ನನ್ನು ಕಾಪಾಡುವಂತೆ ಕೇಳಿಕೊಳ್ಳುತ್ತಾನೆ. ಈ ಹೇಳಿಕೆಯು ಬಹಿರಂಗಗೊಳ್ಳುವಿಕೆಯಿಂದ ರಕ್ಷಿಸಲ್ಪಟ್ಟಿದೆಯೇ ?

(b) 'A' who was hit by bullet, stated in the hospital in the presence of a magistrate that 'B' had fired at him. But 'A' did not die of the injury. Is the statement of 'A' made in the presence of the magistrate admissible in evidence against 'B' ? Or can it be of any other use ?

'ಅ' ಎಂಬಾತನಿಗೆ ಗುಂಡು ತಗುಲಿದ್ದು, ಆತನು ಆಸ್ಪತ್ರೆಯಲ್ಲಿ ಮ್ಯಾಜಿಸ್ಟ್ರೇಟ್ ಅವರ ಸಮ್ಮುಖದಲ್ಲಿ 'ಬ' ನು ತನ್ನ ಮೇಲೆ ಗುಂಡು ಹಾರಿಸಿದ ಎಂದು ಹೇಳಿಕೆ ನೀಡಿದ್ದಾನೆ. ಆದರೆ 'ಅ' ಯು ಗಾಯದಿಂದ ಸಾಯಲಿಲ್ಲ, 'ಬ' ವಿರುದ್ಧದ ಸಾಕ್ಷ್ಯದಲ್ಲಿ, ಮ್ಯಾಜಿಸ್ಟ್ರೇಟ್ ಸಮ್ಮುಖದಲ್ಲಿ 'ಅ' ಮಾಡಿದ ಹೇಳಿಕೆಯನ್ನು ಸ್ವೀಕರಿಸಬಹುದೇ ? ಅಥವಾ ಬೇರೆ ಯಾವುದಕ್ಕಾದರು ಉಪಯೋಗವೇ ?

(c) In a charge of murder, Mr. A while in police custody makes a statement as follows. "Yes, I killed 'B' with a knife and have thrown the knife in a tank near the school". Police recovered the knife from the said place. Which part of this statement is relevant as confession and why ?

ಕೊಲೆಯ ಆರೋಪವನ್ನು ಎದುರಿಸುತ್ತಿರುವ 'ಎ' ಎಂಬಾತನು ಪೊಲೀಸ್ ಕಸ್ಟಡಿಯಲ್ಲಿರುವಾಗ ಈ ಕೆಳಗಿನ ಹೇಳಿಕೆಯನ್ನು ನೀಡುತ್ತಾನೆ. – ''ಹೌದು, ನಾನು 'ಬಿ' ಅನ್ನು ಚಾಕುವಿನಿಂದ ಕೊಂದು ಶಾಲೆಯ ಬಳಿಯ ಟ್ಯಾಂಕ್‌ನಲ್ಲಿ ಚಾಕುವನ್ನು ಎಸೆದಿದ್ದೇನೆ''. ಪೊಲೀಸರು ಸ್ಥಳದಿಂದ ಚಾಕುವನ್ನು ವಶಪಡಿಸಿಕೊಂಡಿದ್ದಾರೆ. ಹೇಳಿಕೆಯ ಯಾವ ಭಾಗವು ತಪ್ಪೊಪ್ಪಿಗೆಗೆ ಸಂಬಂಧಿಸಿದೆ ಮತ್ತು ಏಕೆ ?

UNIT – V

Q. No. 5. (a) Explain the scope of privileged communications between advocate and his client. Marks : 10

ವಕೀಲ ಮತ್ತು ಅವನ ಕಕ್ಷಿದಾರರ ನಡುವಿನ ವಿಶೇಷಾಧಿಕಾರದ ಸಂವಹನಗಳ ವ್ಯಾಪ್ತಿಯನ್ನು ವಿವರಿಸಿರಿ.

OR/ಅಥವಾ

(a) Discuss the scope of cross-examination and explain the questions lawful in cross-examination. Marks : 10

ಪಾಟಿಸವಾಲಿನ ವ್ಯಾಪ್ತಿಯನ್ನು ಚರ್ಚಿಸಿರಿ ಮತ್ತು ಪಾಟಿಸವಾಲಿನಲ್ಲಿಯ ಪ್ರಶ್ನೆಗಳ ಕಾನೂನುಬದ್ಧತೆಯನ್ನು ವಿವರಿಸಿರಿ.

Q. No. 5. (b) In a prosecution for rape, a prosecution witness has turned hostile, can he be cross-examined by prosecution ? Marks : 6

ಅತ್ಯಾಚಾರ ಪ್ರಕರಣವೊಂದರಲ್ಲಿ, ಅಭಿಯೋಜನೆ ಸಾಕ್ಷಿಯೊಬ್ಬನು ಪ್ರತಿಕೂಲ ಸಾಕ್ಷ್ಯ ನುಡಿದಿದ್ದಾನೆ. ಆತನು ಅಭಿಯೋಜಕರಿಂದ ಪಾಟಿಸವಾಲಿಗೆ ಒಳಪಡಬಹುದೇ ? ತಿಳಿಸಿ.

OR/ಅಥವಾ

(b) Corroborative evidence. Marks : 6

ಪ್ರಮಾಣೀಕರಿಸುವ ಸಾಕ್ಷ್ಯ.

---



**VI Semester 3 Year LL.B./VIII Semester 5 Year B.Com.LL.B./B.B.A.LL.B./ B.A.LL.B. (Maj.-Min. System) Examination, January/February 2025 (Odd Sem.)**

**LAW OF EVIDENCE**

Duration : 3 Hours Max. Marks : 80

**Instructions :** 1. Answer all five Units.
2. One essay type questions and short note/problem.
3. Figures to the right indicate marks.
4. Answers should be written either in English or Kannada compulsorily.

UNIT – I

Q. No. 1. (a) Explain the rules relating to relevancy of admission. Marks : 10

ಅಂಗೀಕಾರದ ಸುಸಂಬದ್ಧತೆಯ ನಿಯಮಗಳನ್ನು ವಿವರಿಸಿರಿ.

OR/ಅಥವಾ

(a) Explain the relevancy of facts forming part of same transaction. Marks : 10

ಒಂದು ವ್ಯವಹರಣೆಯ ಭಾಗವಾಗಿರುವ ಘಟನೆಗಳ ಸುಸಂಬದ್ಧತೆಯನ್ನು ವಿವರಿಸಿ.

Q. No. 1. (b) Explain test identification parade. Marks : 6

ಪರೀಕ್ಷಾರ್ಥ ಗುರುತು ಹಿಡಿಯುವ ಪ್ರದರ್ಶನವೆಂದರೇನು ವಿವರಿಸಿರಿ.

OR/ಅಥವಾ

(b) Note on Plea of Alibi. Marks : 6

ಅನ್ಯತ್ರ ಉಪಸ್ಥಿತಿಯ ನಿಲುವಿನ ಬಗ್ಗೆ ಟಿಪ್ಪಣಿ ಬರೆಯಿರಿ.

UNIT – II

Q. No. 2. (a) Define confession. Explain the rules relating to relevancy of confession. Marks : 10

ತಪ್ಪೊಪ್ಪಿಗೆಯನ್ನು ವ್ಯಾಖ್ಯಾನಿಸಿರಿ. ತಪ್ಪೊಪ್ಪಿಗೆ ಸುಸಂಬದ್ಧತೆ ಸಂಬಂಧಿತ ನಿಯಮಗಳನ್ನು ವಿವರಿಸಿರಿ.

OR/ಅಥವಾ

(a) What is dying declaration ? Under what conditions do they become relevant ? Marks : 10

ಮರಣಕಾಲಿಕ ಹೇಳಿಕೆ ಎಂದರೇನು ? ಯಾವ ಷರತ್ತುಗಳನ್ವಯ ಅವು ಸುಸಂಬದ್ಧವಾಗುತ್ತವೆ ?

Q. No. 2. (b) Write a note on : Marks : 6

ಟಿಪ್ಪಣಿ ಬರೆಯಿರಿ.

Relevant judgement.

ಸುಸಂಬದ್ಧ ತೀರ್ಪು.

OR/ಅಥವಾ

(b) Expert opinion. Marks : 6

ಪರಿಣಿತರ ಅಭಿಪ್ರಾಯ.

UNIT – III

Q. No. 3. (a) Explain the relevancy of character of Evidence in Civil and Criminal Cases. Marks : 10

ಅಪರಾಧಿಕ ಮತ್ತು ದಿವಾನಿ ಪ್ರಕರಣಗಳಲ್ಲಿ ನಡತೆಯ ಸಾಕ್ಷ್ಯದ ಸುಸಂಬದ್ಧತೆಯನ್ನು ವಿವರಿಸಿರಿ.

OR/ಅಥವಾ

(a) Difference between oral and documentary evidence with case laws. Explain. Marks : 10

ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ವ್ಯತ್ಯಾಸಗಳನ್ನು ಪ್ರಕರಣಗಳೊಂದಿಗೆ ವಿವರಿಸಿರಿ.

OR/ಅಥವಾ



(a) Explain the Facts of which court must take judicial notice. Marks : 10

ನ್ಯಾಯಾಲಯವು ನ್ಯಾಯಿಕವಾಗಿ ಗಮನಿಸಲೇಬೇಕಾದ ಸಂಗತಿಗಳನ್ನು ವಿವರಿಸಿ.

Q. No. 3. (b) Write a note on Hearsay Evidence. Marks : 6

ವದಂತಿ ಸಾಕ್ಷ್ಯದ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

(b) Write a note on secondary evidence. Marks : 6

ದ್ವಿತೀಯಕ ಸಾಕ್ಷ್ಯದ ಮೇಲೆ ಟಿಪ್ಪಣಿ ಬರೆಯಿರಿ.

UNIT – IV

Q. No. 4. (a) Explain Estoppel and its kinds. Marks : 10

ವಿಬಂಧ ಮತ್ತು ಇದರ ಪ್ರಕಾರಗಳನ್ನು ವಿವರಿಸಿ.

OR/ಅಥವಾ

(a) What is burden of proof ? Explain the rules relating to burden of proof. Marks : 10

ರುಜುವಾತಿನ ಭಾರವೆಂದರೇನು ? ರುಜುವಾತು ಭಾರದ ಸಂಬಂಧಿತ ನಿಯಮಗಳೇನು ವಿವರಿಸಿರಿ.

Q. No. 4. (b) Write a note on presumption as to legitimacy. Marks : 6

ಧರ್ಮಸಂಬಂಧ ಸ್ಥಾನಮಾನದ ಪೂರ್ವಭಾವನೆ.

OR/ಅಥವಾ

(b) Manvita, a married woman has committed suicide after leaving a suicide note that her husband subjected her to cruelty. Decide the relevancy of this suicide case. Marks : 6

ಮನ್ವಿತಾ ಎಂಬಾಕೆಯು ಆತ್ಮಹತ್ಯೆ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದು ತನ್ನ ಗಂಡ ತನಗೆಸಗಿದ ಕ್ರೌರ್ಯದಿಂದ ಎಂದು ಬರೆದಿದ್ದಾಳೆ. ಈ ಆತ್ಮಹತ್ಯೆ ಪ್ರಕರಣದ ಸುಸಂಬದ್ಧತೆಯನ್ನು ನಿರ್ಣಯಿಸಿರಿ.